# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ

## ಕೆ.ಆರ್.ನಗರ

## ಓಎಸ್ 167/2020

ಪಿಡಬ್ಲ್ಯೂ-1

ದಿನಾಂಕ **14.10.2022** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು ಶ್ರೀ ಪಿ ಡಿ   ವಕೀಲರಿಂದ ಪ್ರತಿವಾದಿ ಪರ ವಕೀಲರುಃ

ದಾವಾ ಸ್ವತ್ತು ಮೂಲತಃ ನನ್ನ ತಾತ ಕರಿಯಯ್ಯ ರವರಿಗೆ ಸೇರಿದ್ದು. ನನ್ನ ತಾತನಿಗೆ 5 ಜನ ಹೆಣ್ಣು ಮಕ್ಕಳು ಮತ್ತು 5 ಜನ ಗಂಡು ಮಕ್ಕಳು. ದಾವಾ ಸ್ವತ್ತಿನ ಪಹಣಿಗಳು ಪ್ರಸ್ತುತ ನನ್ನ ತಾತನ ಹೆಸರಿನಲ್ಲಿವೆ. ನನ್ನ ತಂದೆಯ ಸಹೋದರ ಸಹೋದರಿಯರ ನಡುವೆ ದಾವಾ ಸ್ವತ್ತುಗಳು ವಿಭಾಗವಾಗಿಲ್ಲ ಎಂದರೆ ಸರಿ. ನನ್ನ ತಾತನ ಹೆಸರಿನಲ್ಲಿ ಹಳೆ ಮನೆ 3 ಇದೆ . ಹೊಸದಾಗಿ 3 ಮನೆಯನ್ನು ಕಟ್ಟಿದ್ದಾರೆ. ಮನೆಗಳ ವಿವರಗಳನ್ನು ದಾವಾ ಷೆಡ್ಯೂಲ್ ನಲ್ಲಿ ಸೇರಿಸಿಲ್ಲ. ಸದರಿ ಹೊಸ ಮನೆಯಲ್ಲಿ ನನ್ನ ತಂದೆ ಹಾಗೂ ಇಬ್ಬರು ಚಿಕ್ಕಪ್ಪಂದಿರು ವಾಸವಿದ್ದಾರೆ, ಹಳೆ ಮನೆ ಪಾಳು ಬಿದ್ದಿದೆ.

2. ನನ್ನ ತಂದೆಗೆ ನಿರ್ದಿಷ್ಟವಾಗಿ ಇಂತಿಷ್ಟೆ ಆಸ್ತಿಗಳು ಬಂದಿವೆ ಎಂದು ಹೇಳಲು ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ನನ್ನ ತಂದೆಗೆ ಯಾವುದೇ ಆಸ್ತಿ ಬಂದಿಲ್ಲ ಎಂದು ನುಡಿಯುತ್ತಾರೆ. ನನ್ನ ತಂದೆ 2 ನೇ ಪ್ರತಿವಾದಿ ಈರಯ್ಯ ಎಂದು ಹೇಳಲು ದಾಖಲೆ ಹಾಜರುಪಡಿಸುತ್ತೇನೆ. ದಾವಾ ಸ್ವತ್ತಿನ ಚೆಕ್ಕುಬಂದಿ ತೋರಿಸಲು ದಾಖಲೆ ನೀಡಿಲ್ಲ. ದಾವಾ ಸ್ವತ್ತಿನಲ್ಲಿ ನನ್ನ ತಾತನ 10 ಜನ ಮಕ್ಕಳು ಸಹ ಸಮವಾಗಿ ವ್ಯವಸಾಯ ಮಾಡುತ್ತಿದ್ದಾರೆ.

3. ನಾನು ರಾಂಪುರದಲ್ಲಿ ವಾಸವಿದ್ದೇನೆ. ನನ್ನ ಮದುವೆ ಆಗಿ 4 ವರ್ಷ ಆಗಿದೆ. ನನ್ನ ಮದುವೆಗೆ ಸಂಬಂದಪಟ್ಟ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ನೀಡಿಲ್ಲ. ನಾನು 2 ನೇ ಪ್ರತಿವಾದಿ ಮಗಳಲ್ಲ, ನಾನು ಅವರ ಕುಟುಂಬಕ್ಕೆ ಸೇರಿಸಿದ ಸದಸ್ಯೆಯಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು 2 ನೇ ಪ್ರತಿವಾದಿಯ ಪಿತ್ರಾರ್ಜಿತ ಸ್ವತ್ತು ಅಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು ಕರಿಯಯ್ಯರವರ ಸ್ವಯಾರ್ಜಿತ ಸ್ವತ್ತುಗಳು ಎಂದರೆ ಸರಿಯಲ್ಲ. ನಾನು 2 ನೇ ಪ್ರತಿವಾದಿಯ ಮಗಳಲ್ಲ ಆದರೂ ಸಹ ಅಕ್ರಮ ಲಾಭ ಪಡೆಯಲು ಈ ದಾವೆಯನ್ನು ಹೂಡಿದ್ದೇನೆ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಸಂಪೂರ್ಣವಾಗಿ ಪಾಟೀ ಸವಾಲು ಮಾಡಿರುತ್ತಾರೆ.

ಮರುವಿಚಾರಣೆ ಇರುವುದಿಲ್ಲ.

(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇದೆ ಎಂ

(ಪವಿತ್ರ.ಆರ್)

ಪ್ರಧಾನ ಸಿವಿಲ್ ನ್ಯಾಯಾಧೀಶರು,

ಮತ್ತು ಪ್ರದನ್ಯಾದಂ., ಕೆ.ಆರ್.ನಗರ